<u>ಸಾಕ್ಷಿಗೆ ದಿಃ20-03-2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಎಸ್ ಎ ಎಸ್ ವಕೀಲರಿಂದಃ-</u>**

ನಾನು 10 ನೇ ತರಗತಿಯವರೆಗೆ ಶಾಲೆ ಕಲಿತಿದ್ದೇನೆ. ಈಗ ನಾನು ತೇರದಾಳ ಪುರಸಬೆಯ ಚುನಾಯಿತ ಸದಸ್ಯ ಇರುತ್ತೇನೆ. ಈ ದಾವೆಯನ್ನು ನಾನು ಸುನಿಲ್ ಕಲ್ಲಪ್ಪ ಆಳಗೊಂಡ ಈತನ ಮೇಲೆ ದಾಖಲಿಸಿದ್ದೇನೆ. ದಾವಾ ಜಮೀನು 11 ಗುಂಟೆ ಬಿನ್ ಶೇತ್ಕಿ ಜಮೀನು ಆಗಿರುತ್ತದೆ. ಅದರ ಸರ್ವೇ ನಂ.571/5ಬ ಇರುತ್ತದೆ. ಇದರ ಚೆಕ್ಕುಬಂದಿ ಪೂರ್ವಕ್ಕೆ ಸಿದ್ದಾಮ ನಿಂಗಪ್ಪ ಕಾಗಿ ವಗೈರೆ ಇವರ ಜಂಟಿ ಜಮೀನು, ಪಶ್ಚಿಮಕ್ಕೆ ಸುನಿಲ್ ಕಲ್ಲಪ್ಪ ಆಳಗೊಂಡ ಇವರ ಜಮೀನು ಇದ್ದು ಈಗ ಪ್ಲಾಟ್ ಮಾಡಿಕೊಂಡಿದ್ದಾರೆ. ಉತ್ತರಕ್ಕೆ ಮಹಾದೇವಿ ಮುಕುಂದ ರೊಡನ್ನವರ ಇವರ ಜಮೀನು ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ. ನಾನು 2007 ನೇ ಇಸವಿಯಲ್ಲಿ ದಾವಾ ಜಮೀನನ್ನು 1ನೇ ಪ್ರತಿವಾದಿಯಿಂದ ಖರೀದಿ ತೆಗೆದುಕೊಂಡಿದ್ದೇನೆ. ಈ ದಾವೆ ಮಾಡುವ ಕಾಲಕ್ಕೆ 1ನೇ ಪ್ರತಿವಾದಿ ತನ್ನ ಜಮೀನನ್ನು ಎನ್ ಎ ಮಾಡಿಕೊಂಡಿದ್ದು ಪ್ಲಾಟಗಳನ್ನು ಹಾಕಿರಲಿಲ್ಲ. ನಾನು ದಾವಾ ಜಮೀನು ಕುರಿತಾಗಿ ಇನ್ನೊಂದು ಅಸಲು ದಾವಾ ನಂ. 200/2015 ನ್ನು ಹಜರತ್ ಬಾಗಿ ಇವರ ಮೇಲೆ ದಾಖಲಿಸಿದ್ದೇನೆ ಎಂದರೆ ಸರಿ. ಆ ದಾವೆ ಮಾಡುವ ಕಾಲಕ್ಕೆ 1ನೇ ಪ್ರತಿವಾದಿ ತನ್ನ ಜಮೀನಿನಲ್ಲಿ ಪ್ಲಾಟಗಳನ್ನು ಮಾಡಿಕೊಂಡಿದ್ದರು. ಈ ದಾವೆಯನ್ನು ನಾನು ಮೊದಲು ಮಾಡಿದ್ದು ನಂತರದಲ್ಲಿ ಹಜರತ ಬಾಗಿ ಇವರ ಮೇಲೆ, ಮೇಲೆ ಹೇಳಿದ ದಾವೆಯನ್ನು ದಾಖಲಿಸಿದ್ದೇನೆ. ಸದರಿ ದಾವೆಗಳ ನಡುವೆ 4 ತಿಂಗಳ ಅಂತರ ಇದೆ. ನಾನು ಈ ದಾವೆಯನ್ನು ದಿಃ02-12-2015 ರಂದು ದಾಖಲಿಸಿದ್ದೇನೆ ಎಂದರೆ ಸರಿ. ನಾನು ಹಜರತ್ ಇವರ ಮೇಲೆ ದಾಖಲಿಸಿದ ದಾವೆ ದಿಃ 26-11-2015 ರಂದು ದಾಖಲಿಸಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನ್ಯಾಯಾಲಯದ ರಜೆ ಇದ್ದ ಕಾರಣ ನಾನು ಜಮಖಂಡಿ ನ್ಯಾಯಾಲಯದಲ್ಲಿ ಈ ದಾವೆಯನ್ನು ದಾಖಲಿಸಿ ನಂತರ ಅಲ್ಲಿಂದ ಪರವಾಣಿಗೆ ತೆಗೆದುಕೊಂಡು ಇಲ್ಲಿ ದಾಖಲಿಸಿದ್ದೇನೆ ಎಂದು ಹೇಳುತ್ತಾರೆ. ಜಮಖಂಡಿ ನ್ಯಾಯಾಲಯದಲ್ಲಿ ದಾಖಲಿಸಿದ್ದ ದಾವಾ ನಂಬರು ನನಗೆ ನೆನಪಿಲ್ಲ. ನ್ಯಾಯಾಲಯದಿಂದ ಪರವಾಣಿಗೆ ತೆಗೆದುಕೊಂಡಿದ್ದೇವೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ. ನಾನು ಜಮಖಂಡಿ

ನ್ಯಾಯಾಲಯದಲ್ಲಿ ದಾವೆ ದಾಖಲಿಸಿ ಅಲ್ಲಿಂದ ಪರವಾಣಿಗೆ ಪಡೆದುಕೊಂಡು ಈ ದಾವೆಯನ್ನು ದಾಖಲಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಜಾಗದಲ್ಲಿ ನಾವು ಹೊಟೇಲ್ ನಡೆಸುತ್ತಿದ್ದೇವೆ. ಹೋಟೆಲನ ಹೆಸರು ಭವಾನಿ ದಾಬಾ ಇರುತ್ತದೆ. ದಾವಾ ಜಮೀನನ್ನು ನಾನು ಭೂಪರಿವರ್ತನೆ ಮಾಡಿಕೊಂಡಿದ್ದೇನೆ ಎಂದರೆ ಸರಿ. ಸದರಿ ಭೂಪರಿವರ್ತನೆಯನ್ನು ವಸತಿ ಉದ್ದೇಶಕ್ಕಾಗಿ ಮಾಡಿಕೊಂಡಿದ್ದೇನೆ. ನಾನು ದಾವಾ ಜಮೀನಿನಲ್ಲಿ ಹೊಟೆಲ್ ನಡೆಸಲು ಪರವಾಣಗಿ ತೆಗೆದುಕೊಂಡಿಲ್ಲ. ದಾವಾ ಪತ್ರದೊಂದಿಗೆ ಲಗತ್ತಿಸಿದ ಹಾಥ ನಕಾಶೆಗೆ ನಾನು ಮಾಹಿತಿ ನೀಡಿದ್ದೇನೆ. ಎ ಬಿ ಸಿ ಡಿ ಅಕ್ಷರಗಳಿಂದ ತೋರಿಸಿದ ದಾವಾ ಆಸ್ತಿಯಲ್ಲಿ ಪ್ರತಿವಾದಿಯರು ಯಾವುದೇ ಅತಿಕ್ರಮಣ ಮಾಡಿಲ್ಲ ಎಂದರೆ ಸರಿ. ದಾವಾ ಆಸ್ತಿಗೆ ಪ್ರತಿವಾದಿಯರು ಯಾವುದೇ ತೊಂದರೆ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿಯರು ದಾವಾ ಆಸ್ತಿಯನ್ನು ಯೋಗ್ಯ ಬೆಲೆಗೆ ಸ್ವಖುಷಿಯಿಂದ ನನಗೆ ಮಾರಾಟ ಮಾಡಿರುತ್ತಾರೆ. ಅವರಿಗೆ ನನ್ನ ಮೇಲೆ ಯಾವುದೇ ವೈರತ್ವ ಇಲ್ಲ ಎಂದರೆ ಸರಿ. ನನ್ನ ಜಮೀನಿನ ಅತಿಕ್ರಮಣ ಮಾಡಿ ನನಗೆ ತೊಂದರೆ ಕೊಡಬೇಕೆನ್ನುವ ಉದ್ದೇಶ ಅವರಿಗೆ ಇಲ್ಲ ಎಂದರೆ ಸರಿ. ಪ್ರತಿವಾದಿಯರು ತಮ್ಮ ಜಮೀನಿನಲ್ಲಿ ಪ್ಲಾಟ ಮಾಡಿಕೊಂಡಿದ್ದಾರೆ ಎಂದರೆ ಸರಿ.

ನನ್ನ ಜಮೀನನ್ನು ಆಸ್ತಿ ಖರೀದಿಸಿದಾಗ ನಾನು ಸರ್ಕಾರಿ ಮೋಜನಿ ಮಾಡಿಸಿದ್ದೇನೆ. ದಾವೆ ದಾಖಲಿಸಿದ ನಂತರ ಸರ್ಕಾರಿ ಮೋಜನಿ ಮಾಡಿಸಿಲ್ಲ ಆದರೆ ಖಾಸಗಿಯಾಗಿ ಅಳತೆ ಮಾಡಿಸಿಕೊಂಡಿದ್ದೇನೆ. ಆ ಕುರಿತು ಯಾವುದೇ ಪಿಟಿ ಶೀಟನ್ನು ತಯಾರಿಸಿಲ್ಲ. ನಾನು ದಾವಾ ಜಮೀನಿಗೆ ತಂತಿ ಬೇಲಿ ಹಾಕಿಕೊಳ್ಳುವಾಗ ಪ್ರತಿವಾದಿಯರು ನನ್ನ ಜಾಗ ಅಷ್ಟು ಬರುವುದಿಲ್ಲ ಎಂದು ಧಮಿಕಿ ಹಾಕಿದ್ದ ಕಾರಣ ನಾನು ಈ ದಾವೆಯನ್ನು ದಾಖಲಿಸಿದ್ದೇನೆ. ನಂತರದಲ್ಲಿ ನನ್ನ ಜಾಗ ಇಂತಿಷ್ಟು ಬರುತ್ತದೆ ಎಂದು ತೋರಿಸಲು ನಾನು ಅಳತೆ ಮಾಡಿಸಿಲ್ಲ. ಆ ಕಾಲಕ್ಕೆ ಹಿರಿಯರು ಕೊಡಿ ಅಳತೆ ಮಾಡಿಸಿ ಎಂದು ಹೇಳಿದ್ದರು. ಅಂದಿನಿಂದ ಇಂದಿನವರೆಗೂ ನಾನು ಸರ್ಕಾರಿ ಮೋಜನಿ ಮಾಡಿಸಿಲ್ಲ ಎಂದರೆ ಸರಿ. ನಾನು ಪ್ರತಿವಾದಿಯರ ಜಮೀನನ್ನು ಅತಿಕ್ರಮಣ ಮಾಡಿ ಅವರ ಜಮೀನನ್ನು ಕಬಳಿಸುವ ಉದ್ದೇಶ ಹೊಂದಿದ್ದೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ಪ್ರತಿವಾದಿಯರು ನನ್ನ ಜಮೀನಿಗೆ ಯಾವುದೇ ತೊಂದರೆ ಮಾಡದೇ

ಇದ್ದರೂ ಸಹ ಈ ಸುಳ್ಳು ದಾವೆಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರನ್ನು ಹೆದರಿಸಿ ಅವರ ಜಮೀನನ್ನುಅತಿಕ್ರಮಣ ಮಾಡುವ ಉದ್ದೇಶ ಹೊಂದಿದ್ದೆ ಎಂದರೆ ಸರಿಯಲ್ಲ. ಅದಕ್ಕಾಗಿ ನಾನು ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇ. ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ .

ಅಸಲು ದಾವಾ ಸಂ.206/2015
ಪಿ.ಡಬ್ಲ್ಯೂ .-1